# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

**ತರಗತಿ : 8** **ವಿಷಯ : ಸಮಾಜ ವಿಜ್ಞಾನ** **ಅಂಕಗಳು : 50**

**ಸಮಯ : 2 ಗಂಟೆ 30 ನಿಮಿಷ**

ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ

ವಿದ್ಯಾರ್ಥಿಯ ಹೆಸರು : ______________________

ವಿದ್ಯಾರ್ಥಿಯ SATS ಸಂಖ್ಯೆ : ☐☐☐☐☐☐☐☐☐ ವಿದ್ಯಾರ್ಥಿಯ ಸಹಿ : ______________

ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ

ಶಾಲೆಯ ಡೈಸ್ ಕೋಡ್ : ☐☐☐☐☐☐☐☐☐☐☐

ಶಾಲೆಯ ಹೆಸರು : ______________________

ಕ್ಲಸ್ಟರ್ : ______________ ಬ್ಲಾಕ್ : ______________ ಜಿಲ್ಲೆ : ______________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ______________

ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| 9 | | 19 | | 29 | |
| 10 | | 20 | | 30 | |
| – | | – | | 31 | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ______________________

ಮೌಲ್ಯಮಾಪಕರ ಸಹಿ : ______________

**I.** **ಪ್ರತಿ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಉತ್ತರವನ್ನು ಬರೆಯಿರಿ.** **[16 x 1 = 16]**

1. ಅಶ್ವಘೋಷನು ರಚಿಸಿದ ಸಾಹಿತ್ಯ ಕೃತಿ

   A. ಮುದ್ರಾರಾಕ್ಷಸ B. ರಾಜತರಂಗಿಣಿ

   C. ಬುದ್ಧಚರಿತ D. ಘೋ–ಕೋ–ಕಿ

   ಉತ್ತರ: ☐ ____________________

2. ಸಿಂಧು ಸರಸ್ವತಿ ನಾಗರಿಕತೆ ಸ್ವಚ್ಛತೆಗೆ ಹೆಚ್ಚು ಮಹತ್ವ ನೀಡಿದ್ದರು ಎಂಬುದಕ್ಕೆ ಐತಿಹ್ಯ ಆಧಾರ

   A. ಧೋಲವೀರ B. ಮೊಹೆಂಜೋದಾರೋ

   C. ಕಾಲಿಬಂಗನ್ D. ಲೋಥಾಲ್

   ಉತ್ತರ: ☐ ____________________

3. ಅದ್ವೈತ ಸಿದ್ಧಾಂತದ ಪ್ರತಿಪಾದಕರು

   A. ಬಸವಣ್ಣ B. ರಾಮಾನುಜಚಾರ್ಯರು

   C. ಮಧ್ವಾಚಾರ್ಯರು D. ಶಂಕರಾಚಾರ್ಯರು

   ಉತ್ತರ: ☐ ____________________

4. ಜೈನ ಧರ್ಮದ ಮೊದಲ ತೀರ್ಥಂಕರ

   A. ಮಹಾವೀರ B. ಪಾರ್ಶ್ವನಾಥ

   C. ಗೌತಮಬುದ್ಧ D. ಋಷಭನಾಥ

   ಉತ್ತರ: ☐ ____________________

5. ಚಿತ್ರದಲ್ಲಿರುವ ದೇವಾಲಯವನ್ನು ಗುರುತಿಸಿ.



A. ಬೃಹದೀಶ್ವರ ದೇವಾಲಯ

B. ಚೆನ್ನಕೇಶವ ದೇವಾಲಯ

C. ಕೈಲಾಸನಾಥ ದೇವಾಲಯ

D. ಕಾಶಿ ವಿಶ್ವೇಶ್ವರ ದೇವಾಲಯ

ಉತ್ತರ: ☐ ____________________

6. ರಾಜ್ಯ, ಸಂವಿಧಾನ ಮತ್ತು ಕಾನೂನುಗಳ ಬಗೆಗಿನ ಜ್ಞಾನವನ್ನು ಅಧ್ಯಯನ ಮಾಡುವ ಶಾಸ್ತ್ರ

A. ಅರ್ಥಶಾಸ್ತ್ರ

B. ವಾಣಿಜ್ಯಶಾಸ್ತ್ರ

C. ಸಮಾಜಶಾಸ್ತ್ರ

D. ರಾಜ್ಯಶಾಸ್ತ್ರ

ಉತ್ತರ: ☐ ____________________

7. ಕೆಳಗಿನವುಗಳಲ್ಲಿ ಪ್ರಜಾಪ್ರಭುತ್ವದ ಅನುಕೂಲಗಳು ಯಾವುವೆಂದರೆ.

i) ಪ್ರಜಾಪ್ರಭುತ್ವವು ಸಮಾನತೆಯ ತತ್ವಾಧಾರಿತವಾಗಿದೆ

ii) ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಅವಕಾಶವಿದೆ

iii) ರಾಷ್ಟ್ರದ ಹಿತಾಸಕ್ತಿಗಿಂತ ಪಕ್ಷದ ಹಿತಾಸಕ್ತಿಯೇ ಬಹುಮುಖ್ಯವಾಗಿರುತ್ತದೆ

iv) ಪಕ್ಷದಿಂದ ಪಕ್ಷಕ್ಕೆ ಪಕ್ಷಾಂತರಗೊಳ್ಳುವ ಕ್ರಿಯೆಯು ಸರ್ಕಾರಗಳನ್ನು ಅಸ್ಥಿರಗೊಳಿಸುತ್ತದೆ

A. i ಮತ್ತು iii

B. ii ಮತ್ತು iv

C. iii ಮತ್ತು iv

D. i ಮತ್ತು ii

ಉತ್ತರ: ☐ ____________________

8. 'ಕಲ್ಚರ್' ಎಂಬ ಇಂಗ್ಲಿಷ್ ಪದವು ಈ ಭಾಷೆಯಿಂದ ಬಂದಿದೆ

A. ಲ್ಯಾಟಿನ್

B. ಗ್ರೀಕ್

C. ರೋಮ್

D. ಜರ್ಮನ್

ಉತ್ತರ: ☐ ____________________

9. ಕೈಗಾರಿಕಾ ಸಮಾಜದ ಲಕ್ಷಣ

A. ಕೃಷಿ ಸಮಾಜ

B. ಹೊಸ ಹೊಸ ಶೋಧಗಳ ಮೂಲಕ ಸಾಮಾಜಿಕ ಪರಿವರ್ತನೆ

C. ಪಶುಗಳ ಒಡೆತನ

D. ಆಹಾರಕ್ಕಾಗಿ ಅಲೆದಾಡುವುದು

ಉತ್ತರ: ☐ ____________________

10. ಆರ್ಟಿಸಿಯನ್ ಬಾವಿಗಳು ಹೆಚ್ಚಾಗಿ ಕಂಡುಬರುವ ಖಂಡ

A. ಏಷಿಯಾ

B. ಆಫ್ರಿಕಾ

C. ಆಸ್ಟ್ರೇಲಿಯಾ

D. ದಕ್ಷಿಣ ಅಮೆರಿಕ

ಉತ್ತರ: ☐ ____________________

11. "ಮಿಸ್ಟ್ರೆಲ್" ಇದಕ್ಕೆ ಉತ್ತಮ ಉದಾಹರಣೆ

A. ಸ್ಥಳೀಯ ಮಾರುತಗಳು

B. ಋತುಮಾನ ಮಾರುತಗಳು

C. ಆವರ್ತ ಮಾರುತಗಳು

D. ನಿರಂತರ ಮಾರುತಗಳು

ಉತ್ತರ: ☐ ____________________

12. ಏಷ್ಯಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಾಗಳಿಂದ ಸುತ್ತುವರಿಯಲ್ಪಟ್ಟಿರುವ ಸಾಗರ

A. ಫೆಸಿಫಿಕ್ ಸಾಗರ

B. ಹಿಂದು ಮಹಾಸಾಗರ

C. ಅಟ್ಲಾಂಟಿಕ್ ಸಾಗರ

D. ಆರ್ಕ್ಟಿಕ್ ಸಾಗರ

ಉತ್ತರ: ☐ ____________________

13. 'ಒಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಬೋಧಿಸುತ್ತಿರುವುದು' ಈ ಆರ್ಥಿಕ ಚಟುವಟಿಕೆಗೆ ಒಂದು ಉತ್ತಮ ಉದಾಹರಣೆ

A. ವಿತರಣೆ ಚಟುವಟಿಕೆ

B. ವಿನಿಮಯ ಚಟುವಟಿಕೆ

C. ಅನುಭೋಗಿ ಚಟುವಟಿಕೆ

D. ಉತ್ಪಾದಕ ಚಟುವಟಿಕೆ

ಉತ್ತರ: ☐ ____________________

14. ಒಂದು ರಾಷ್ಟ್ರದ ಒಟ್ಟು ಆದಾಯವನ್ನು ರಾಷ್ಟ್ರದ ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ಬರುವುದೇ

A. ತಲಾ ವರಮಾನ

B. ವಾರ್ಷಿಕ ವರಮಾನ

C. ರಾಷ್ಟ್ರೀಯ ವರಮಾನ

D. ರಾಷ್ಟ್ರೀಯ ನಿವ್ವಳ ಲಾಭ

ಉತ್ತರ: ☐ ____________________

15. ಈ ಕೆಳಗಿನವುಗಳಲ್ಲಿ ಏಕವ್ಯಕ್ತಿ ಮಾಲೀಕತ್ವ ವ್ಯವಹಾರ ಸಂಸ್ಥೆಗಳ ಅನುಕೂಲಗಳು

i) ಸ್ವಂತ ಬಂಡವಾಳದಿಂದ ಪ್ರಾರಂಭಿಸಬಹುದು

ii) ಆಡಳಿತ ಕೌಶಲಗಳು ಸೀಮಿತವಾಗಿರುತ್ತವೆ

iii) ಗ್ರಾಹಕರ ಜೊತೆಯಲ್ಲಿ ನೇರ ಸಂಪರ್ಕ ಇಟ್ಟುಕೊಂಡಿರುತ್ತಾರೆ

iv) ನಷ್ಟ ಅಥವಾ ಹೊಣೆಗಾರಿಕೆಯನ್ನು ಒಬ್ಬನೇ ಹೊರಬೇಕಾಗುವುದಿಲ್ಲ

A. i ಮತ್ತು iv

B. ii ಮತ್ತು iii

C. i ಮತ್ತು iii

D. ii ಮತ್ತು iv

ಉತ್ತರ: ☐ ____________________

16. ಭಾರತದಲ್ಲಿ ಸಹಕಾರಿ ಸಂಘಗಳು ಪ್ರಾರಂಭವಾದ ವರ್ಷ

A. 2004

B. 1856

C. 1950

D. 1904

ಉತ್ತರ: ☐ ____________________

**II. ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **[4 x 1 = 4]**

17. ಭಾರತದಲ್ಲಿ ಪ್ರಾಗೈತಿಹಾಸಿಕ ಕಾಲದ ಬೂದಿಯ ಕುರುಹುಗಳು ಕಂಡುಬಂದಿರುವ ಗವಿಯನ್ನು ಹೆಸರಿಸಿ.

18. ಆಚಾರ–ವಿಚಾರಗಳಿಗೆ ಉದಾಹರಣೆ ಕೊಡಿ.

19. ದಿನನಿತ್ಯದ ಜೀವನದಲ್ಲಿ ಸಮಾಜವನ್ನು ಅರ್ಥ ಮಾಡಿಕೊಳ್ಳಲು ಸಮಾಜಶಾಸ್ತ್ರ ಹೇಗೆ ನೆರವಾಗುತ್ತದೆ?

20. ತುಷ್ಟಿಗುಣವನ್ನು ವ್ಯಾಖ್ಯಾನಿಸಿ.

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **[6 x 2 = 12]**

21. ಎರಡನೇ ಪುಲಕೇಶಿಯು ತನ್ನ ಸಾಮ್ರಾಜ್ಯವನ್ನು ಹೇಗೆ ವಿಸ್ತರಿಸಿದನು?

22. ಮಿಡ್ನಾಪುರದಲ್ಲಿ ಸಿಕ್ಕ ಕಮಲೆಯ ಸಾಮಾಜಿಕ ಸ್ಥಿತಿ ಹೇಗಿತ್ತು?

23. ಸಾಗರ ತಳಗಳ ಲಕ್ಷಣಗಳು ವೈವಿಧ್ಯತೆಗಳಿಂದ ಕೂಡಿದೆ. ಹೆಸರಿಸಿ.

24. ಮಣ್ಣಿನ ಮಾಲಿನ್ಯವನ್ನು ನಿಯಂತ್ರಿಸುವ ಕ್ರಮಗಳನ್ನು ಪಟ್ಟಿಮಾಡಿ.

25. ಭಾರತದ ಪೌರತ್ವವನ್ನು ಕಳೆದುಕೊಳ್ಳುವ ವಿಧಾನಗಳನ್ನು ವಿವರಿಸಿ.

26. ವಿತರಣೆಯನ್ನು ಸಮರ್ಪಕ ರೀತಿಯಲ್ಲಿ ಮಾಡುವ ಬಗೆ ಹೇಗೆ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಉತ್ತರಿಸಿ.** **[3 x 3 = 9]**

27. ಅಶೋಕ ಮಹಾರಾಜನು ಕಳಿಂಗ ಯುದ್ಧದ ನಂತರ ತನ್ನ ಸಾಮ್ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿದನು. ಸಮರ್ಥಿಸಿ.

28. ಗೋಳದ ಚಿತ್ರ ಬರೆದು ಅದರ ಮೇಲೆ ಏಳು ಪ್ರಧಾನ ಅಕ್ಷಾಂಶಗಳನ್ನು ಗುರುತಿಸಿ ಅವುಗಳನ್ನು ಹೆಸರಿಸಿ.

29. ವಿದೇಶಿ ವ್ಯಾಪಾರದ ಪ್ರಮುಖ ವಿಧಗಳನ್ನು ವಿವರಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **[4 x 1 = 4]**

30. ಗ್ರಾಮಗಳ ಅಭಿವೃದ್ಧಿಯಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳ ಕಾರ್ಯಗಳು ಪ್ರಮುಖವಾಗಿವೆ. ಸ್ಪಷ್ಟೀಕರಿಸಿ.

[ Turn over

**VI. 31.** **ಭಾರತದ ನಕ್ಷೆ ಬಿಡಿಸಿ ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.** **[1 + 4 = 5]**

A) ಮಗಧ

B) ಮಥುರಾ

C) ತಲಕಾಡು

D) ತಂಜಾವೂರು